ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಇ-ಮೇಲ್: deo.kodagu@gmail.com
ವೆಬ್‌ಸೈಟ್: http://www.kodagu.nic.in

ಸಂಖ್ಯೆ:ಪ್ರ.ವಿ/4/2018-19

ದಿನಾಂಕ:19-08-2018

# ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯಾದ್ಯಂತ ಭಾರಿ ಮಳೆಯಾಗುತ್ತಿದ್ದು, ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸುವ ಕುರಿತು

********

ವಿಷಯಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಯಾದ್ಯಂತ ಭಾರೀ ಮಳೆಯಾಗುತ್ತಿದ್ದು, ಹಲವೆಡೆ ಭೂ ಕುಸಿತ ಉಂಟಾಗಿದ್ದು ಹೆದ್ದಾರಿ ಸೇರಿದಂತೆ ಗ್ರಾಮೀಣ ರಸ್ತೆ ಸಂಪರ್ಕ ಕಡಿತಗೊಂಡಿರುತ್ತದೆ. ಗಾಳಿ ಮಳೆಯಿಂದ ನೆಲ ಕುಸಿದು ಹಲವಾರು ಮನೆಗಳಿಗೆ ಹಾನಿಯಾಗಿರುತ್ತದೆ. ನದಿ, ತೋಡು ಮುಂತಾದವುಗಳು ತುಂಬಿ ಹರಿಯುತ್ತಿದ್ದು, ಸಮೀಪದ ಮನೆಗಳು ಜಲಾವೃತ್ತಗೊಂಡಿರುತ್ತದೆ. ಜಿಲ್ಲೆಯಲ್ಲಿ ಇನ್ನೂ ಕೆಲವು ದಿನಗಳ ಕಾಲ ಭಾರೀ ಮಳೆಯಾಗುವ ಸಂಭವ ಇರುವ ಬಗ್ಗೆ ಹವಾಮಾನ ಇಲಾಖೆಯ ಸೂಚನೆ ಇರುತ್ತದೆ. ಜಿಲ್ಲೆಯ ಹಲವು ಭಾಗಗಳಲ್ಲಿ ತೀವ್ರ ಮಳೆಯಿಂದ ಹಾಗೂ ಭೂಕುಸಿತದಿಂದ ಜಲಾವೃತವಾಗಿದ್ದು ಹಲವು ಮಂದಿ ಸಂತ್ರಸ್ತರು ಸಿಲುಕಿಕೊಂಡಿರುತ್ತಾರೆ. ಇವರುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಪ್ರಕೃತಿ ವಿಕೋಪದಿಂದ ಸಂತ್ರಸ್ತರಾದವರನ್ನು ಗಂಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗುತ್ತಿದೆ. ಜಿಲ್ಲೆಯ ಹಲವು ಭಾಗಗಳಿಂದ ಸಾರ್ವಜನಿಕರು/ಸಂತ್ರಸ್ತರು ಸಹಾಯಕ್ಕಾಗಿ ಜಿಲ್ಲಾಡಳಿತದ ತುರ್ತು ಸಹಾಯವಾಣಿಗೆ ಕರೆ ಮಾಡಿ ನೆರವು ಕೋರುತ್ತಿದ್ದು, ಈ ಬಗ್ಗೆ ಶೀಘ್ರವಾಗಿ ಸ್ಪಂದಿಸಲು ಎಲ್ಲಾ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಜಿಲ್ಲೆಯಲ್ಲಿ ತುರ್ತು ಪರಿಸ್ಥಿತಿ ಇರುವುದರಿಂದ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ತುರ್ತು ಕಾರ್ಯಗಳನ್ನು ನಿರ್ವಹಿಸಲು ಜಿಲ್ಲಾಧಿಕಾರಿಗಳ ಕಚೇರಿಗೆ ಈ ಕೆಳಕಂಡಂತೆ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಆದೇಶಿಸಿದೆ.

| ಕ್ರ.ಸ. | ಅಧಿಕಾರಿ/ನೌಕರರ ಹೆಸರು, ಪದನಾಮ, ಕಚೇರಿ ವಿಳಾಸ | ನಿರ್ವಹಿಸಬೇಕಾದ ಕಾರ್ಯದ ವಿವರ | ಷರಾ |
|---|---|---|---|
| 1 | 2 | 3 | 4 |
| 1 | ಶ್ರೀ ಎನ್.ಯು.ಯೋಗೇಶ್, ಪ್ರ.ದ.ಸ, ಪಶುಪಾಲನಾ ಇಲಾಖೆ, ಮಡಿಕೇರಿ. | ಜಿಲ್ಲಾಧಿಕಾರಿಗಳ ಆಪ್ತ ಶಾಖೆಯಲ್ಲಿ ಹೆಚ್ಚುವರಿ ಕಾರ್ಯ | |
| 2 | ಶ್ರೀ ದಿವಿನ್, ಪ್ರ.ದ.ಸ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಡಿಕೇರಿ. | | |

| | | | |
|---|---|---|---|
| 3 | ಶ್ರೀ ಜಗದೀಶ್, ಪ್ರ.ದ.ಸ, ಪ್ರಾದೇಶಿಕ ಆಯುಕ್ತರ ಕಚೇರಿ, ಮೈಸೂರು. | ಜಿಲ್ಲಾಧಿಕಾರಿ ಕಚೇರಿಯ ವಿಪತ್ತು ನಿರ್ವಹಣಾ ಕೇಂದ್ರ (ಕಂಟ್ರೋಲ್ ರೂಂ) | ಭಾನುವಾರ, ಮಂಗಳವಾರ, ಗುರುವಾರ, |
| 4 | ಶ್ರೀ ಮಂಜುನಾಥ್, ದ್ವಿ.ದ.ಸ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ | | |
| 5 | ಶ್ರೀ ಮನೋಜ್, ಪ್ರ.ದ.ಸ, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಡಿಕೇರಿ. | ಜಿಲ್ಲಾಧಿಕಾರಿ ಕಚೇರಿಯ ವಿಪತ್ತು ನಿರ್ವಹಣಾ ಕೇಂದ್ರ (ಕಂಟ್ರೋಲ್ ರೂಂ) | ಸೋಮವಾರ, ಬುಧವಾರ, ಶುಕ್ರವಾರ, ಶನಿವಾರ |
| 6 | ಶ್ರೀ ಬಿ.ರಾಕೇಶ್, ಪ್ರ.ದ.ಸ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಡಿಕೇರಿ | | |
| 7 | ಶ್ರೀ ರಂಗನಾಥ್, ಪ್ರ.ದ.ಸ, ಐಟಿಡಿಪಿ ಕಚೇರಿ, ಮಡಿಕೇರಿ | | |
| 8 | ಶ್ರೀ ರಮೇಶ್.ಎಸ್, ದ್ವಿ.ದ.ಸ, ಪ್ರಾದೇಶಿಕ ಆಯುಕ್ತರ ಕಚೇರಿ, ಮೈಸೂರು. | ಜಿಲ್ಲಾಧಿಕಾರಿ ಕಚೇರಿಯ ವಿಪತ್ತು ನಿರ್ವಹಣಾ ಶಾಖೆಗೆ ನೆರವಾಗುವುದು | |
| 9 | ಶ್ರೀ ಆಶಿಕ್, ದ್ವಿ.ದ.ಸ, ಐಟಿಡಿಪಿ ಕಚೇರಿ, ಮಡಿಕೇರಿ. | | |
| 10 | ಶ್ರೀ ರಕ್ಷಿತ್, ದ್ವಿ.ದ.ಸ, ಸಮಾಜ ಕಲ್ಯಾಣ ಇಲಾಖೆ, ಮಡಿಕೇರಿ. | | |
| 11 | ಶ್ರೀ ಜನಾರ್ಧನ, ದ್ವಿ.ದ.ಸ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಡಿಕೇರಿ. | ಜಿಲ್ಲಾಧಿಕಾರಿ ಕಚೇರಿಯ ಸ್ಪಂದನ ಕೇಂದ್ರದಲ್ಲಿ ಸ್ಥಾಪಿಸಿರುವ ಗೋದಾಮು | |
| 12 | ಶ್ರೀ ಅರುಣ್‌ಕುಮಾರ್, ಪ್ರ.ದ.ಸ, ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಮಡಿಕೇರಿ | | |
| 13 | ಶ್ರೀ ಅಶ್ವಿನಿಕುಮಾರ್, ದ್ವಿ.ದ.ಸ, ಕೃಷಿ ಇಲಾಖೆ, ಮಡಿಕೇರಿ. | | |

ನಿಯೋಜಿಸಲಾದ ಸಿಬ್ಬಂದಿಗಳು ಕೂಡಲೇ ಕರ್ತವ್ಯಕ್ಕೆ ವರದಿ ಮಾಡಿಕೊಂಡು, ಯಾವುದೇ ಲೋಪಕ್ಕೆ ಅವಕಾಶವಿರದಂತೆ ಜವಾಬ್ದಾರಿಯುತವಾಗಿ ವಹಿಸಿದ ಕೆಲಸಗಳನ್ನು ನಿರ್ವಹಿಸಲು ಸೂಚಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಪ್ರತಿಯನ್ನು:

ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ಸೂಕ್ತ ಕ್ರಮಕ್ಕಾಗಿ.